**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.74/2020**

**ಪಿಡಬ್ಲ್ಯೂ- 03 (ಸಿಡಬ್ಲ್ಯೂ-13)**

ಸಾಕ್ಷಿದಾರರ ಹೆಸರು : ಅಭಿಷೇಕ ಚವ್ಹಾಣ

ತಂದೆ/ಗಂಡನ ಹೆಸರು: ಚಂದ್ರಶೇಖರ

ವಯಸ್ಸು : **21** ವರ್ಷ

ಉದ್ಯೋಗ : ವಿದ್ಯಾರ್ಥಿ

ವಾಸಸ್ಥಳ : ಹಂಚನಾಳ ಎಲ್.ಟಿ. ನಂ.**1**

**ಸಾಕ್ಷಿಗೆ ಇಂದು ದಿನಾಂಕ :- 04.12.2023 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

1. ಚಾ.ಸಾ.1 ನನಗೆ ಅಣ್ಣನಾಗಬೇಕು. ಚಾ.ಸಾ.12 ಬೇಬಿ ನನ್ನ ತಾಯಿ. ಚಾ.ಸಾ.14 ರಿಂದ 32 ರವರು ನನಗೆ ಗೊತ್ತು. ನನಗೆ ಈ ಪ್ರಕರಣದ ಎಲ್ಲಾ ಆರೋಪಿತರು ಗೊತ್ತು. (ಈ ದಿನ ಆರೋಪಿ ನಂ.3 ಮತ್ತು 5 ಗೈರುಹಾಜರಿದ್ದು, ಆರೋಪಿತರ ಪರ ವಕೀಲರು ರಿಯಾಯಿತಿ ಅರ್ಜಿ ಸಲ್ಲಿಸಿದ್ದು, ಅದರಲ್ಲಿ ಆರೋಪಿ ನಂ.3 ಮತ್ತು 5 ರವರು ಅವರ ಗುರುತಿನ ಬಗ್ಗೆ ತಕರಾರು ಎತ್ತುವುದಿಲ್ಲವೆಂದು ಬರೆದಿರುತ್ತಾರೆ). ನಮ್ಮ ಮನೆ ಹಂಚನಾಳ ಎಲ್.ಟಿ. ನಂ.1 ರಲ್ಲಿದೆ. ಆರೋಪಿತರ ಮನೆ ನಮ್ಮ ಮನೆಯ ಎದುರುಗಡೆ ಇದೆ. ಮೃತ ಚಂದ್ರಶೇಖರ ನನ್ನ ತಂದೆ.

2. ಆರೋಪಿ ನಂ.2 ಕಿಶನ್ ನನ್ನ ತಂದೆ ತೀರಿಕೊಳ್ಳುವುದಕ್ಕಿಂತ ಎರಡು ವರ್ಷ ಪೂರ್ವದಲ್ಲಿ ನನ್ನ ತಂದೆಯಿಂದ ಐದು ಲಕ್ಷ ರೂಪಾಯಿ ಕೈಗಡ ಸಾಲ ಪಡೆದುಕೊಂಡಿದ್ದನು. ನನ್ನ ತಂದೆ ಆ ರೀತಿ ಸಾಲ ಕೊಟ್ಟ ನಂತರ ಅದನ್ನು ಮರುಪಾವತಿ ಮಾಡಲು 2 ನೇ ಆರೋಪಿ ಕಿಶನಗೆ ಮೇಲಿಂದ ಮೇಲೆ ಕೇಳುತ್ತಿದ್ದರು. ಅದಕ್ಕೆ ಎಲ್ಲ ಆರೋಪಿತರು ನನ್ನ ತಂದೆಗೆ ಇಷ್ಟಾಕ್ ಕಿರಿಕಿರಿ ನಿಂದು, ನಿನ್ನನ್ನು ಖಲಾಸ ಮಾಡುತ್ತೇವೆ ಅನ್ನುತ್ತಿದ್ದರು.

**ಎಸ್.ಸಿ.ನಂ.74/2020**

**ಪಿಡಬ್ಲ್ಯೂ- 03 (ಸಿಡಬ್ಲ್ಯೂ-13)**

3. ದಿನಾಂಕ 07.07.2016 ರಂದು ರಂಜಾನ ಹಬ್ಬ ಇದ್ದು, ಆ ದಿನ ಸಾರ್ವಜನಿಕ ರಜೆ ಇತ್ತು. ಆ ದಿನ ರಜಾ ಇರುವುದರಿಂದ ನಾನು, ನನ್ನ ಅಣ್ಣ ಚಾ.ಸಾ.1 ಪಂಕಜ ಮನೆಯಲ್ಲಿಯೇ ಇದ್ದೆವು. ಆ ದಿನ ಸಂಜೆ 6.00 ರಿಂದ 6.30 ಘಂಟೆಗೆ ನನ್ನ ತಂದೆ, ನನ್ನ ತಾಯಿ ಮತ್ತು ಚಾ.ಸಾ.1 ನಮ್ಮ ಮನೆಯ ಬಾಗಿಲ ಮುಂದೆ ಕಟ್ಟೆಯ ಮೇಲೆ ಕುಳಿತಿದ್ದರು. ಆಗ ನಾನು ನಮ್ಮನೆಯಲ್ಲಿಯೇ ಇದ್ದೆನು. ನಾನು ಮನೆಯಲ್ಲಿದ್ದಾಗ ನನಗೆ ಆರೋಪಿತರ ಮನೆಯ ಎದುರುಗಡೆ ಒದರಾಡುವುದು ಚೀರಾಡುವುದು ಕೇಳಿತು. ನಾನು ಹೊರಗೆ ಬಂದು ನೋಡಲಾಗಿ ಆರೂ ಜನ ಆರೋಪಿತರು ಕೈಯಲ್ಲಿ ಆಯುಧಗಳನ್ನು ಹಿಡಿದುಕೊಂಡು ಓಡಿ ಬರುತ್ತಿದ್ದರು. ಆಗ ನಾನು ಆರೋಪಿತರ ಮನೆಯ ಒಳಗಡೆ ಹೋಗಿ ನೋಡಲಾಗಿ ಅಲ್ಲಿ ನನ್ನ ತಂದೆ ಕೆಳಗೆ ಬಿದ್ದಿದ್ದರು ಹಾಗೂ ಅಲ್ಲಿ ಕೆಳಗಡೆ ಎಲ್ಲ ಕಡೆ ರಕ್ತ ಚೆಲ್ಲಿತ್ತು. ನನ್ನ ಮಮ್ಮಿ ಮತ್ತು ಚಾ.ಸಾ.1 ನನ್ನ ಅಣ್ಣ ಅಳುತ್ತಾ ನಿಂತಿದ್ದರು. ಆಗ ನಾನು ನನ್ನ ತಾಯಿಗೆ ಏನಾಯಿತೆಂದು ಕೇಳಿದೆ. ಆಗ ಅವಳು ನಾವು ಮನೆಯ ಕಟ್ಟೆಯ ಮೇಲೆ ಕುಳಿತಿದ್ದೆವು, ಆಗ ಸಂಘರ್ಷಕ್ಕೊಳಗಾದ ಬಾಲಕ ಆಕಾಶ ನಮ್ಮನೆಯ ಕಟ್ಟೆಯ ಹತ್ತಿರ ಬಂದು ನನ್ನ ತಂದೆಗೆ ಹಣ ಕೊಡುತ್ತೇನೆಂದು ಹೇಳಿದ, ಅದಕ್ಕೆ ನಮ್ಮ ತಂದೆ ಆರೋಪಿತರ ಮನೆಗೆ ಹೋದರು ಹಾಗೂ ತಂದೆಯ ಹಿಂದಿನಿಂದ ಅವರೂ ಸಹ ಆರೋಪಿತರ ಮನೆಗೆ ಹೋದೆವೆಂದು ಹೇಳಿದರು. ನನ್ನ ತಾಯಿ ನನಗೆ ನನ್ನ ತಂದೆ ಆರೋಪಿತರ ಮನೆಯ ಒಳಗಡೆ ಹೋದಾಗ 6 ನೇ ಆರೋಪಿ ಬೇಬಿ ನನ್ನ ತಂದೆಯ ಕಣ್ಣಲ್ಲಿ ಖಾರದ ಪುಡಿ ಎರಚಿದಳು, ಆರೋಪಿ ನಂ.2 ರಿಂದ 4 ನನ್ನ ತಂದೆಯನ್ನು ಗಟ್ಟಿಯಾಗಿ

ಹಿಡಿದುಕೊಂಡಿದ್ದರು ಹಾಗೂ ಸಂಘರ್ಷಕ್ಕೊಳಗಾದ ಬಾಲಕ ಆಕಾಶ ಹತ್ಯಾರದಿಂದ ನನ್ನ ತಂದೆಯ ಹೊಟ್ಟೆಗೆ ಎದೆಗೆ ಚುಚ್ಚುತ್ತಿದ್ದ ಎಂದು ಹೇಳಿದಳು. ನನ್ನ ತಾಯಿ ನನಗೆ 5 ನೇ ಆರೋಪಿ ಪ್ರಕಾಶ ಜಂಬೆಯಿಂದ ನನ್ನ ತಂದೆಗೆ ಹೇಗೆ ಬೇಕಾದ ಹಾಗೆ ಚುಚ್ಚುತ್ತಿದ್ದ ಎಂದು ಹೇಳಿದಳು. ನನ್ನ ತಾಯಿ ನನಗೆ ತಾನು ಮತ್ತು ಚಾ.ಸಾ.1 ಬಿಡಿಸಲು ಹೋದಾಗ ಆರೋಪಿತರು ನೀವು ಸಮೀಪ ಬಂದರೆ ನಿಮಗೂ ಸಹ ಖಲಾಸ ಮಾಡುತ್ತೇವೆ ಎಂದು ಅಂದರು ಎಂದು ಹೇಳಿದಳು.

4. ನಂತರ ನಾವು ನಮ್ಮ ತಂದೆಗೆ ಆರೋಪಿತರ ಮನೆಯಿಂದ ಹೊರಗಡೆ ತಂದೆವು. ನಂತರ ನಾವು ನಮ್ಮ ತಂದೆಗೆ ಅಲ್-ಅಮೀನ ಆಸ್ಪತ್ರೆ, ವಿಜಯಪುರಕ್ಕೆ ಕರೆದುಕೊಂಡು ಬಂದೆವು. ನಂತರ ನನ್ನ ಅಣ್ಣ ಚಾ.ಸಾ.1 ಸಂಜೆ 7.30 ರಿಂದ 8.00 ಘಂಟೆಗೆ ಠಾಣೆಗೆ ಹೋಗಿ ದೂರು ಕೊಟ್ಟನು. ನಾನು ಆರೋಪಿ ನಂ.2 ರಿಂದ 6 ಹಾಗೂ ಸಂಘರ್ಷಕ್ಕೊಳಗಾದ ಬಾಲಕನನ್ನು ನೋಡಿದರೆ ಗುರುತಿಸುತ್ತೇನೆ. ನನ್ನ ತಂದೆಗೆ ಹೊಡೆಯಲು ಬಳಸಿದ ಹತ್ಯಾರ ನೋಡಿದರೆ ಗುರುತಿಸುತ್ತೇನೆ. ಆ ಹತ್ಯಾರ ನೋಡುತ್ತಿದ್ದು, ಅದು ಈಗಾಗಲೇ ಎಂ.ಓ.10 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು:- ಶ್ರೀ ಎಸ್.ಆರ್.ಕೆ., ವಕೀಲರಿಂದ ಆರೋಪಿತರ ಪರಃ**

*ಶ್ರೀ ಎಸ್.ಆರ್.ಕೆ., ವಕೀಲರು ದಂಡ ಪ್ರಕ್ರಿಯಾ ಸಂಹಿತೆ ಕಲಂ 231(2)ರಲ್ಲಿ ಅರ್ಜಿ ಸಲ್ಲಿಸಿ ಈ ಸಾಕ್ಷಿ ಹಾಗೂ ಚಾ.ಸಾ.1, 12, 15 ರಿಂದ 17 ರವರ ಪಾಟಿ ಸವಾಲನ್ನು ಏಕಕಾಲದಲ್ಲಿ ಮಾಡುವುದಾಗಿ ಹೇಳಿ ಪಾಟಿ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಅವರ ಕೋರಿಕೆಯ ಮೇಲೆ ಪಾಟಿ ಸವಾಲನ್ನು ಮುಂದೂಡಲಾಯಿತು.*

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.